ಸಾಕ್ಷಿಯನ್ನು ದಿ: 03.08.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರ ಮನೆ ನನ್ನ ಹೆಂಡತಿ ತಂಗಿಯ ಗಂಡನ ಮನೆಯಾಗಿರುತ್ತದೆ. ನಿಡಿ.2 ರ ಮನೆ ದಾವಾ ಆಸ್ತಿಯ ಪೂರ್ವಕ್ಕೆ ಬರುತ್ತದೆ. ನಿಡಿ.2 ರ ಮನೆ ಮುಂಬಾಗಿಲು ಉತ್ತರ ದಿಕ್ಕಿಗೆ ಬರುತ್ತದೆ. ನಿಡಿ.2 ರ ಮನೆಗೆ ರಸ್ತೆ ಇರುವುದಿಲ್ಲ. ನಿಡಿ.2 ಮನೆ ಮುಂದಿರುವ ಉತ್ತರ ದಿಕ್ಕಿನ ರಸ್ತೆಯಲ್ಲಿ ನಮ್ಮ ಗ್ರಾಮದ ದೇವರ ಮೆರವಣಿಗೆ ನಿಡಿ.2 ರ ಮನೆವರೆಗೂ ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ರ ಮನೆ ಮುಂದಿರುವ ರಸ್ತೆಯಲ್ಲಿ ದೇವರು ಮೆರವಣಿಗೆ ಬಂದು ಪೂಜೆ ಮಾಡಿಸಿಕೊಂಡು ಮುಂದೆ ಹೋಗುತ್ತದೆ ಎಂದರೆ ಸಾಕ್ಷಿಯು ಸದರಿ ರಸ್ತೆಯಲ್ಲಿ ಬಂದು ಪುನಃ ವಾಪಸ್ಸು ಹೋಗುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ನಿಡಿ.4 ರ ಹುಲ್ಲಿನ ಮನೆ ಮುಂದೆ ಪ್ರತಿವಾದಿ ಹೆಂಡತಿ ನಿಂತಿರುತ್ತಾಳೆಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ಅರ್ಧ ಭಾಗ ನನಗೂ ಇದೆ ಎಂದು ನುಡಿಯುತ್ತಾರೆ. ನಿಡಿ.4 ರಲ್ಲಿ ಕಾಣಿಸುವ ವ್ಯಕ್ತಿಯು ಕಂದೇಗಾಲ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿರುತ್ತಾನೆ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.5 ಎಂದು ಗುರುತಿಸಲಾಯಿತು. ನಿಡಿ.5 ರಲ್ಲಿ ಕಾಣಿಸುವ ಆರ್.ಸಿ.ಸಿ ಮನೆ ನಿಡಿ.4 ರ ಮನೆಯ ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಕಚ್ಚಾ ನಕಾಶೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.6 ಎಂದು ಗುರುತಿಸಲಾಯಿತು. ನಿಡಿ.6 ರಲ್ಲಿ ಕಾಣಿಸುವ ರಸ್ತೆಯು ನನ್ನ ಮನೆವರೆಗೂ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ ಅಂತ್ಯವಾಗುತ್ತದೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದಿದ ನಂತರ ನಮ್ಮ ಕುಟುಂಬದ ಯಜಮಾನಿಕೆ ನಾನೇ ವಹಿಸಿಕೊಂಡಿರುತ್ತೇನೆಂದರೆ ಸರಿ. ಉತ್ತಮವಾದ ಆಸ್ತಿಗಳನ್ನು ನನ್ನ ಭಾಗಕ್ಕೆ ಪಡೆದುಕೊಂಡು ಕಳಪೆ ಆಸ್ತಿಯನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ್ ನಲ್ಲಿ ಪೂ-ಪಃ 45 ಅಡಿ, ಉ-ದಃ 90 ಅಡಿ ಪೈಕಿ ಉತ್ತರ ಭಾಗದ ಪೂ-ಪಃ45 ಅಡಿ, ಉ-ದಃ 45 ಅಡಿ ನಾನು ಇಟ್ಟುಕೊಂಡು ದಕ್ಷಿಣ ಭಾಗಕ್ಕೆ ಪೂ-ಪಃ 45 ಅಡಿ, ಉ-ದಃ 45 ಅಡಿ ಪ್ರತಿವಾದಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ದಕ್ಷಿಣ ಭಾಗದಲ್ಲಿ ಕೊಟ್ಟ ಜಾಗದಲ್ಲಿ ಪ್ರತಿವಾದಿ ನಿಡಿ.4 ರ ಶೆಡನ್ನು ಕಟ್ಟಿಕೊಂಡು ವಾಸವಾಗಿದ್ದಾನೆಂದರೆ ಸರಿಯಿಲ್ಲ. ನಿಡಿ.4 ರ ಮನೆಯಲ್ಲಿ ನಾನು ವಾಸ ಮಾಡುತ್ತಿದ್ದ ಕುರಿತು ದಾಖಲಾತಿಗಳು ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಮತ್ತು ಪ್ರತಿವಾದಿ ಮಧ್ಯೆ ಜಗಳವಾಗಿ ಪ್ರತಿವಾದಿ ನನ್ನ ವಿರುದ್ದ ದೂರು ದಾಖಲು ಮಾಡಿರುತ್ತಾನೆಂದರೆ ಸಾಕ್ಷಿಯು ಅವರೇ ನನಗೆ ಹೊಡೆದಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿ ನನ್ನ ವಿರುದ್ದ ದೂರು ದಾಖಲು ಮಾಡಿರುತ್ತಾನೆಂದರೆ ಸರಿ. ಸಾಕ್ಷಿ ಮುಂದುವರೆದು ನಾನು ದೂರು ದಾಖಲು ಮಾಡಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿಸ್ತೀರ್ಣವನ್ನು ನಾನು ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ